ಹಾಸನ ಡಿಸ್ಟ್ರಿಕ್ಟ್.

ತಾರೀಖು 29ನೆ ನವೆಂಬರ್ 1909.

ಚೆನ್ನಸುಬ್ಬಸೆಟ್ಟರ ಹೆಂಡತಿ ರಾಮಕ್ಕ ಮ್ಮನಿಂದ ಸರ್ಕಾರಕ್ಕೆ ಬರಬೇಕಾದ ಕಂದಾಯದ ಬಾಕಿಗಾಗಿ ಜೀಲೂರು ತಾಲ್ಲೂಕು ಆರೇಹಳ್ಳಿ ಹೋಬಳಿ ಶಿರಗುರ ಗ್ರಾಮದ ಕಾಫಿ ಮತ್ತು ಇತರ ಜಮೀನುಗಳು ಸದರಿ ಶಿರಗುರ ಗ್ರಾಮದಲ್ಲಿ 31-1-1910ರಲ್ಲು ದಿವಿ 11 ಘಂಟೆಗೆ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಗೆ 1909ನೆ ಇಸವಿ ಡಿಸೆಂಬರ್ 9ನೆ ಮಕ್ರುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 885—886ನೆ ಪುಟಗಳನ್ನು ನೋಡತಕ್ಕದ್ದು.

ನರಸಿಂಗರಾವ್ ಪೂರ್ಣಯ್ಯ,
ಛಾರ್ ಡಿಪ್ಯೂಟಿ ಕಮಿಷನರ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ ೧೯೦೯—10ನೆ ಇಸವಿ ವಿ॥ ಅರ್ಜೀ ನಂಬರ್ 327.

ಬೆಂಗಳೂರು ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯಟ್ಟಿನಲ್ಲಿ ಕ್ಲಾರ್ಕ್ ಆಗಿದ್ದು ಮೃತಪಟ್ಟ ಎಚ್. ವೆಂಕಟಾಚಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಶ್ರೀನಿವಾಸಕೃಷ್ಣಮಾಚಾರ್ ವಗೈರೆ, ಮೃತಪಟ್ಟ ಸದರಿ ಎಚ್. ವೆಂಕಟಾಚಾರ್ರಿಗೆ ಮುಖ್ಯ ವಾರಸ್ದಾರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಎಚ್. ವೆಂಕಟಾಚಾರ್ರ ಜಿಂದಗಿ ಬಗ್ಯಾಗಿ ಬರ ತಕ್ಕ ರೂಪಾಯಿ 3,141—5—1 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಪಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ 1ನೆ ಶ್ರೀನಿವಾಸಕೃಷ್ಣಾಚಾರ್ರ ಹೆಂಡತಿ ಶ್ರೀರಂಗಮ್ಮಾಳ್, 2ನೆ ಕೃಷ್ಣಯ್ಯಂಗಾರ್ರ ಹೆಂಡತಿ ಅಲಮೇಲಮ್ಮಾಳ್, 3ನೆ ಲಕ್ಷ್ಮಮ್ಮಾಳ್, 4ನೆ ಅಮ್ಮಣ್ಣಮ್ಮಾಳ್ ಇವರುಗಳ ಅರ್ಜಿಯನ್ನು ಸ್ ೧೯೦೯ನೆ ಇಸವಿ ಡಿಸೆಂಬರು ತಿಂಗಳು ತಾರೀಖು 17ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನೆ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಎಚ್. ವೆಂಕಟಾಚಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೯ನೆ ಇಸವಿ ಡಿಸೆಂಬರ್ ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಬಿ. ನಾಗಪ್ಪ,
ಸಬ್ ಜಡ್ಜ್.

ಮೈಸೂರು ಗವರ್ನ್‌ಮೆಂಟ್ ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್‌ರವರ ಆಫೀಸಿನಿಂದ.

ನೋಟಿಫಿಕೇಷ್ ನಂಬರ್ 687—C. S. 24.

ಮೊಕ್ಕಾಂ ಬೆಂಗಳೂರು, ತಾರೀಖು 9-10ನೆ ಡಿಸೆಂಬರ್ 1909.

ಈ ಕೆಳಗೆ ನಮೂದಿಸಿರುವ ಕೋ ಆಪರೇಟಿವ್ ಸೊಸೈಟಿಯು, 1909ನೆ ಇಸವಿಯ ಮೈಸೂರು ಕೋ ಆಪರೇಟಿವ್ ಸೊಸೈಟಿಗಳ ರೆಗ್ಯುಲೇಷ್ 6ನೆ ಸೆಕ್ಷ್ 2ನೆ ಬಳಿ ಪ್ರಕರಣಕ್ಕನುಸಾರವಾಗಿ ರಿಜಿಸ್ಟರು ಮಾಡಲ್ಪಟ್ಟಿರುತ್ತದೆ :—

ಹೆಸರು	ಸ್ಥಳ.	ರಿಜಿಸ್ಟರು ಆದ ತಾರೀಖು.
ಬೆಂಗಳೂರು ಬಿಲ್ಡಿಂಗ್ ಕೋ ಆಪರೇಟಿವ್ ಸೊಸೈಟಿ, ಲಿಮಿಟೆಡ್.	ಬೆಂಗಳೂರು ಸಿಟಿ ...	1ನೆ ಡಿಸೆಂಬರ್ 1909ನೆ ಇಸವಿ.

ಎಂ. ಶ್ಯಾಮರಾವ್,
ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್.